CC.10833/2018 (PW-1 )

**<u>ಸಾಕ್ಷಿಯನ್ನು ದಿಃ 27.06.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ.ಎಲ್.ಡಿ.ಆರ್. ವಕೀಲರಿಂದಃ</u>**

ನಾನು ಒಬ್ಬರು ಐ.ಪಿ.ಎಸ್. ಅಧಿಕಾರಿರವರ ಸಹೋದರ ಎಂದರೆ ಸರಿ. ಆ ಐ.ಪಿ.ಎಸ್. ಅಧಿಕಾರಿರವರು ಇನ್ನು ಕರ್ತವ್ಯದಲ್ಲಿದ್ದಾರೆ ಎಂದರೆ ಸರಿ. ಆ ನನ್ನ ಸಹೋದರ ಐ.ಜಿ.ಪಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ದೂರಿನಲ್ಲಿ ಕಾಣಿಸಿರುವಂತೆ ಕೃತ್ಯವನ್ನು ಆರೋಪಿ ಎಸಗಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರನ ಪ್ರಭಾವ ಬಳಸಿ ಆರೋಪಿ ವಿರುದ್ದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣ ಸಿವಿಲ್ ಸ್ವರೂಪದ್ದು ಆಗಿದ್ದರು ನನ್ನ ಸಹೋದರ ಪ್ರಭಾವ ಬಳಸಿ ಆರೋಪಿಯ ವಿರುದ್ದ ಈ ಕ್ರಿಮಿನಲ್ ಪ್ರಕರಣ ದಾಖಲಾಗುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಮೂರು ಕರಾರು ಪತ್ರಗಳು ಇವೆ. ನನಗೆ ತೋರಿಸಿದ ನಿಪಿ-1 ಮೊದಲ ಕ್ರಯ ಪತ್ರವಾಗಿದೆ. ನಿಪಿ-1 ಕ್ರಯದ ಕರಾರು ಪತ್ರದ ಎಲ್ಲಾ ಪುಟಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಿಪಿ-1 ರಲ್ಲಿ ಎರಡು ಪುಟಗಳನ್ನು ರದ್ದುಪಡಿಸಿ ನಿಪಿ-2 ರಂತೆ ಕ್ರಯದ ಕರಾರು ಪತ್ರವನ್ನು ಮಾಡಲಾಗಿದೆ. ನಿಪಿ-1 ಕ್ರಯದ ಕರಾರು ಪತ್ರವನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಇನ್ನೂ ಎರಡು ಕ್ರಯದ ಕರಾರು ಪತ್ರವನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಅನಾರೋಗ್ಯ ಇರುವುದರಿಂದ ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ನೀಡುವಂತೆ ಕೋರಿದ್ದು ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**